ಹೀಗೆ ಸೋವಿಯತ್ ರಷ್ಯಾದ ಪತನವನ್ನೇ ಶೋಧಿಸ ಹೊರಟ ಕೃತಿಗಳು ಹೆಚ್ಚಿಲ್ಲ. ಕೇಶವ ಮಳಗಿಯವರ 'ಅಂಗದ ಧರೆ' ಅಂತಹ ಅಪರೂಪದ ಇನ್ನೊಂದು ಕೃತಿ. ಸ್ವತಃ ಬೇಂದ್ರೆಯವರನ್ನು ರಷ್ಯಾದ ಸಾಮ್ಯವಾದದ ಯಶಸ್ಸು, ಸೋಲುಗಳು ಕಾಡಿದ್ದವೆ ಎಂದರೆ ಇರಲಾರದು ಎಂದೇ ಹೇಳುವ ದಿವಾಣಜಿ, ಒಬ್ಬ ಕವಿ ಅರಿವಿದ್ದೊ ಇಲ್ಲದೆಯೊ ತನ್ನ ಸಮಕಾಲೀನ ಸತ್ಯಗಳ ಬಗ್ಗೆ ಆಡುತ್ತಿರುತ್ತಾನೆ ಎನ್ನುವುದನ್ನು ಸಾಧಿಸುತ್ತಾರೆ. ಬೇಂದ್ರೆ ಕಾವ್ಯದ ಹಿನ್ನೆಲೆಯಲ್ಲಿ ಬರುವ ಮಾರ್ಕ್ಸ್, ಸ್ಟಾಲಿನ್, ನೆರೂಡಾ, ರಸೆಲ್, ನೆಹರೂ ಈ ರೀತಿಯಾಗಿ ದಿವಾಣಜಿಯವರ ಮುಖೇನ ತುಂಬ ಭಿನ್ನವಾದ ಒಳನೋಟವನ್ನು ಒದಗಿಸುತ್ತಾರೆ.

ವರ್ಗಸಂಘರ್ಷ, ಸಾಮಾಜಿಕ ಅಸಮಾನತೆ, ಪ್ರಗತಿಪರ ಚಳವಳಿಗಳು ಮುಂತಾದ ವಿಚಾರಗಳನ್ನೂ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನಂಥ ಅತ್ಯಾಧುನಿಕ ವಿಚಾರಗಳನ್ನೂ ಚರ್ಚೆಗೆ ಒಡ್ಡುವ ದಿವಾಣಜಿ, ಬೇಂದ್ರೆಯವರ ಕಾವ್ಯದಲ್ಲಿ ನಾವು ಇರುವುದನ್ನು ಬಿಟ್ಟು ಇರದುದರ ಬಗ್ಗೆ ಚರ್ಚಿಸುವುದು ಸರಿಯಾದ ಕ್ರಮವಲ್ಲ ಎನ್ನುತ್ತಾರೆ. ಹೃದಯ ಪರಿವರ್ತನೆಗಿಂತ ಮಿಗಿಲಾದ ವರ್ಗಪರಿವರ್ತನೆಯಿಲ್ಲ ಎನ್ನುವ ನಿಲುವು ಗಾಂಧಿಯದೂ ಆಗಿತ್ತು, ವಿವೇಕಾನಂದರದ್ದೂ ಆಗಿತ್ತು ಎನ್ನುವ ದಿವಾಣಜಿ ಈ ಚರ್ಚೆಯನ್ನು ಬೆಳೆಸುವ ಬಗೆ ಕುತೂಹಲಕಾರಿಯಾಗಿದೆ. ಟಿ.ಎಸ್. ಎಲಿಯೆಟ್ಟನ ಉದಾಹರಣೆಯನ್ನು ತೆಗೆದುಕೊಂಡು ಬ್ಲೇಕ್ ಮತ್ತು ಮಿಲ್ಟನ್ನನ ಕಾವ್ಯದ ಬಗ್ಗೆ ಗಮನ ಸೆಳೆಯುತ್ತ, ತನ್ನ ಸಂಗೀತದ ಬಗ್ಗೆ ಬಿಥೊವನ್ ಕೊಟ್ಟ ಒಂದು ಹೇಳಿಕೆಯನ್ನು ಬೇಂದ್ರೆಯವರ ಗಮನಕ್ಕೆ ತಂದಾಗ ನಡೆದ ವಿದ್ಯಮಾನವನ್ನು ಅವರಿಲ್ಲಿ ಕಟ್ಟಿಕೊಡುತ್ತಾರೆ. ಅಂತಿಮವಾಗಿ ಕಾವ್ಯದ ಗಮ್ಯ ಯಾವುದು, ಬದುಕಿನ ಗಮ್ಯ ಯಾವುದು ಎನ್ನುವುದನ್ನು ಅರಿಯಲು ಇದು ನಮಗೆ ಅವಶ್ಯ ಅರ್ಥವಾಗಬೇಕು.

ನಿಸರ್ಗ, ಅಧ್ಯಾತ್ಮ, ಪುರಾಣ ಮತ್ತು ದೈನಂದಿನ ಸಾಮಾನ್ಯ ವಸ್ತು ಕೂಡ ಕಾಣಿಸಿಕೊಳ್ಳುವ ಬಗೆ ಮತ್ತು ಪಡೆಯುವ ಹೊಳಹುಗಳಿಗೆ ಅಂತಃಸ್ಫುರಣದ ನೆಲೆಯನ್ನು ಒದಗಿಸುವಾಗ ಅವರ ಬೇರೆ ಬೇರೆ ಕವಿತೆಗಳೊಂದಿಗೆ ಇರುವ ಅಂತರ್‌ಸಂಬಂಧವನ್ನೂ, ಸಮೀಕ್ಷಕರ ತಕರಾರುಗಳನ್ನೂ ಒಟ್ಟಿಗೇ ಗಮನಿಸುವುದು ಮತ್ತು ಕವಿತೆಯ ಸಂಭಾವ್ಯ ಹಿನ್ನೆಲೆಯ ವಿದ್ಯಮಾನಗಳನ್ನು ವಿವರಿಸಿಯೂ ಕವಿತೆಯ ರಸಾಸ್ವಾದಕ್ಕೆ ಈ ಯಾವ ಹಿನ್ನೆಲೆಯ ಅರಿವಿನ ಅಗತ್ಯವೂ ಇಲ್ಲ ಎಂದೂ ಪ್ರತಿಪಾದಿಸುವುದು ಇಲ್ಲಿ ಕಾಣಬರುವ ಮಹತ್ವದ ವಿಮರ್ಶಾ ಕ್ರಮವಾಗಿದೆ.

'ಬೇಂದ್ರೆಯವರೊಡನೆ' ಎಂದಿರುವ ನಾಲ್ಕನೆಯ ಭಾಗ ಸಾಹಿತ್ಯದ ಓದು, ಅದರ ಉದ್ದೇಶ, ಸರಳವಾದ ಅಗತ್ಯ ಮುಂತಾದ ವಿಚಾರಗಳನ್ನು ಮಂಡಿಸುತ್ತ ಸಾಗುತ್ತದೆ. ಇಲ್ಲಿರುವುದೆಲ್ಲಾ ಬೇಂದ್ರೆಯವರ ಮಾತುಗಳು ಎಂದಿದ್ದರೂ ಇದನ್ನು ದಿವಾಣಜಿಯವರು ಆಡಿರುವುದು. ಹಾಗಾಗಿ, ಇದರಲ್ಲಿ ಬೇಂದ್ರೆಯವರ ಪಾಲೆಷ್ಟು, ದಿವಾಣಜಿಯವರ ಪಾಲೆಷ್ಟು ಎಂದು ಹೇಳುವುದು ಸ್ವಲ್ಪ ಕಷ್ಟ. ಹಾಗಿದ್ದೂ ಇಲ್ಲಿ ಬರುವ ವಿಚಾರಗಳೆಲ್ಲವೂ ಸಾಹಿತ್ಯ ನಮ್ಮ ಬದುಕಿನಲ್ಲಿ ನಿರ್ವಹಿಸುವ ಪಾತ್ರದ ಕುರಿತಾಗಿಯೇ ಇವೆ. ಹಾಗೆಯೇ ಕೊನೆಯಲ್ಲಿರುವ 'ಬೇಂದ್ರೆ ನೆನಪುಗಳು' ಭಾಷೆಯ ಸಂವಹನದ ಇತಿಮಿತಿಯ ಕುರಿತೇ ನಡೆದ ಚರ್ಚೆಯಂತಿದೆ.

ತೀರ ತಡವಾಗಿಯಾದರೂ ಬೇಂದ್ರೆ ಮತ್ತು ದಿವಾಣಜಿ ಈ ರೀತಿಯಾಗಿ ಆವಿರ್ಭವಿಸಿರುವುದು ಕನ್ನಡಕ್ಕೆ ಬಹು ಅಗತ್ಯವೂ ಮಹತ್ವದ್ದೂ ಆದ ಕಾಣ್ಕೆಯಾಗಿದೆ. ಇದರ ಹಿಂದೆ ಅವರ ಸಹೋದರ ಪ್ರಹ್ಲಾದ ದಿವಾಣಜಿ ಅವರ ಅವಿಶ್ರಾಂತ ಕಾಳಜಿ, ಶ್ರಮ, ಅದಮ್ಯ ಪ್ರೀತಿಯೂ ಇದ್ದು ಅವರಿಗೆ ನಮ್ಮೆಲ್ಲರ ಕೃತಜ್ಞತೆ ಸಲ್ಲಬೇಕಿದೆ.